# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ –435/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಕೃಷ್ಣೇಗೌಡ | ಪ್ರಾಸಾ: | 3 |
| ತಂದೆ ಹೆಸರು | : | ರಾಮೇಗೌಡ | ಚಾಸಾ: | 9 |
| ವಯಸ್ಸು | : | 50 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:21.01.2026. | |
| ವೃತ್ತಿ | : | ವ್ಯವಸಾಯ | | |
| ವಾಸ ಸ್ಥಳ | : | ಹೊಸ ಮುದ್ದಾಪುರ | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. ನನಗೆ ಇಬ್ಬರು ಮಕ್ಕಳು. ಚಾಸಾ–2 ನನ್ನ ಮೊದಲನೆ ಮಗಳು. 2 ನೇ ಮಗ ದರ್ಶನ್ ಬೆಂಗಳೂರಿನಲ್ಲಿ ಬೇಕರಿಯಲ್ಲಿ ಕೆಲಸ ಮಾಡುತ್ತಾನೆ. ನನ್ನ ಮಗಳು ಪ್ರಿಯಾಂಕಾಳನ್ನು ಸೋಮನಹಳ್ಳಿ ಗ್ರಾಮದ ರಾಜೇಗೌಡರ ಮಗ ಶ್ರೀಧರ್ ಎಂಬುವವರಿಗೆ ಮದುವೆ ಮಾಡಲು ತೀರ್ಮಾನ ಮಾಡಿ ಎರಡು ಕುಟುಂಬದವರು ಮದುವೆಗೆ ಒಪ್ಪಿದೇವು. ಅದೇ ರೀತಿ ನನ್ನ ಮಗಳು ಶ್ರೀಧರ್ ನನ್ನು ಮದುವೆಯಾಗಲು ಒಪ್ಪಿಕೊಂಡಿದ್ದರು. ಬೇರಿಯಾ ಗ್ರಾಮದ ಚಾಮುಂಡೇಶ್ವರಿ ಕಲ್ಯಾಣ ಮಂಟಪದಲ್ಲಿ ಪ್ರಿಯಾಂಕ ಹಾಗೂ ಶ್ರೀಧರ್ ರವರ ಮದುವೆಯಾಗಿರುತ್ತದೆ. ಮದುವೆ ನಂತರ ಸುಮಾರು 20 ದಿನ ನನ್ನ ಮಗಳು ಮತ್ತು ಶ್ರೀಧರ್ ಚೆನ್ನಾಗಿದ್ದರು.

2. ನನ್ನ ಅಳಿಯ ಶ್ರೀಧರ್ ನನಗೆ ಫೋನ್ ಮಾಡಿ, ಅವರ ಮನೆಗೆ ನನ್ನನ್ನು ಕರೆಯಿಸಿಕೊಂಡರು. ನಟರಾಜ್ ಜೊತೆ ನನ್ನ ಮಗಳು ಸಂಬಂಧ ಇಟ್ಟುಕೊಂಡಿರುತ್ತಾಳೆ ಮತ್ತು ಫೋನ್ ನಲ್ಲಿ ಮಾತಾನಾಡುತ್ತಾ ಇರುತ್ತಾಳೆ ಎಂದು ನನಗೆ ತಿಳಿಸಿದರು. ಇಬ್ಬರು

ಯಜಮಾನರ ಜೊತೆ ನಾನು ಶ್ರೀಧರ್ ಮನೆಗೆ ಹೋಗಿರುತ್ತೇನೆ. ಅಲ್ಲಿ ನಟರಾಜ್ ಸಹ ಇದ್ದರು. ಮನೆಯಲ್ಲಿ ಅ ವಿಚಾರ ಬಗೆ ಹರಿಯದ ಕಾರಣ ಕೆ ಆರ್ ಪೇಟೆ ಪೊಲೀಸ್ ಠಾಣೆಗೆ ಹೋದೆವು. ಶ್ರೀಧರ್ ಜೊತೆ ನಾನು ಸಂಸಾರ ಮಾಡುವುದಿಲ್ಲ, ನಟರಾಜ್ ಜೊತೆ ಹೋಗುತ್ತೇನೆ ಎಂಬುದಾಗಿ ನನ್ನ ಮಗಳು ಹೇಳಿರುತ್ತಾಳೆ. ಈ ಬಗ್ಗೆ ನಾವು ದೂರು ಕೊಟ್ಟೆವು. ಚಾಸಾ–2 ರವರ ತಾಳಿಯನ್ನು ಬಿಚ್ಚಿಸಿಕೊಂಡು ಶ್ರೀಧರ್ ಹೊರಟುಹೋದರು.

3. ನಟರಾಜ್ ರವರಿಗೆ ವಿಚಾರ ಮಾಡಲಾಗಿ ಅವರಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದರು. ಆರೋಪಿಯೇ ನಟರಾಜ್ ರವರು ಹಿರಿಯ ಹೆಂಡತಿ. ಇಬ್ಬರನ್ನು ನಾನು ನೋಡಿಕೊಳ್ಳುತ್ತೇನೆ ಎಂಬುದಾಗಿ ನಟರಾಜ್ ನು ಪೊಲೀಸರ ಮುಂದೆ ಹೇಳಿರುತ್ತಾನೆ. ಮದುವೆಯಾಗುವ ಪೂರ್ವದಲ್ಲಿ ಭದ್ರತೆ ವಿಚಾರ ಕುರಿತು ಯಾವುದೇ ವ್ಯವಹಾರ ಆಗಿರುವುದಿಲ್ಲ.

4. ಚುಂಚನಕಟ್ಟೆ ರಾಮದೇವರ ದೇವಸ್ಥಾನದಲ್ಲಿ ನನ್ನ ಮಗಳು ಪ್ರಿಯಾಂಕಾಳನ್ನು ನಟರಾಜ್ ನಿಗೆ ಕೊಟ್ಟು ಮದುವೆ ಮಾಡಿಕೊಟ್ಟೆವು. ಅ ಸಮಯದಲ್ಲಿ ನಮ್ಮ ಕಡೆಯವರು ಇದ್ದರು. ಮದುವೆಯಾದ ಮೇಲೆ ನಟರಾಜ್ ನು ಚಾಸಾ–2 ರವರನ್ನು ಕರೆದುಕೊಂಡು ಎಲ್ಲಿಗೆ ಹೋದರು ಎನ್ನುವುದು ಗೊತ್ತಿಲ್ಲ. ನಟರಾಜ್ ಮತ್ತು ಹಿರಿಯ ಹೆಂಡತಿ ಆರೋಪಿಯ ಜೊತೆ ಜಗಳ ಮಾತುಕತೆ ಇದ್ದ ವಿಚಾರ ಗೊತ್ತಿಲ್ಲ. ಆರೋಪಿಯು ನನ್ನ ಮಗಳ ಮೇಲೆ ಯಾವ ಕಾರಣಕ್ಕೆ ಯಾವ ರೀತಿ ದ್ವೇಷ ಇಟ್ಟುಕೊಂಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಚಾಸಾ–2 ಮತ್ತು ನಟರಾಜ್ ಎಲ್ಲೆಲ್ಲಿ ವಾಸವಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

5. ಯಾರೊಬ್ಬರು ನನಗೆ ಫೋನ್ ಮಾಡಿ ಆರೋಪಿಯು ನನ್ನ ಮಗಳ ಕತ್ತಿಗೆ ಚಾಕು ಹಾಕಿರುತ್ತಾರೆ ಎಂದು ತಿಳಿಸಿದರು. ನಾನು ಆಸ್ಪತ್ರೆಗೆ ಬಂದು ನನ್ನ ಮಗಳನ್ನು ನೋಡಿರುವುದಿಲ್ಲ. ನನ್ನ ಮಗಳಿಗೆ ಎಲ್ಲಿ ಗಾಯವಾಗಿತ್ತು ಎನ್ನುವುದನ್ನು ನಾನು ನೋಡಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ನಟರಾಜ್ ನು ನಮ್ಮ ಹೆಸರಿಗೆ 25 ಗುಂಟೆ ಜಮೀನನ್ನು ಬರೆದು ಕೊಟ್ಟಿದ್ದ ವಿಚಾರಕ್ಕೆ ಈ ಗಲಾಟೆಯಾಗಿರುತ್ತದೆ. ಪೊಲೀಸರಿಗೆ ನಾನು ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸರ್ಕಾರಿ ಅಭಿಯೋಜಕರವರಿಂದ :**

6. ಮದುವೆಯಾದ 11 ದಿನದ ನಂತರ ನನ್ನ ಅಳಿಯ ಶ್ರೀಧರ್ ಕರೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಮ್ಮಂದಿರಾದ ಪದ್ಮರಾಜ್ ಮತ್ತು ಗಂಗಾಧರ ಶ್ರೀಧರ್ ಮನೆಗೆ ಹೋಗಿದ್ದೆವು ಎಂದರೆ ಸರಿ. ದೂರು ನೀಡಿದರೆ ಊರಿನಲ್ಲಿ ಮರ್ಯಾದೆ ಹಾಳಾಗುತ್ತದೆ ಎಂದು ಠಾಣೆಯ ಹೊರಗೆ ಮಾತುಕತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಟರಾಜ್ ರವರಿಗೆ ಈಗಾಗಲೇ ಮದುವೆಯಾಗಿದ್ದರಿಂದ ನನ್ನ ಮಗಳನ್ನು ಆತನ ಜೊತೆ ಕಳುಹಿಸಲು ಭದ್ರತೆ ಬೇಕೆಂದು ನಟರಾಜ್ ರವರಿಗೆ ಸೇರಿದ್ದ ಸರ್ವೆ ನಂಬರ್ 7/4 ರಲ್ಲಿ 25 ಗುಂಟೆ ಜಮೀನನ್ನು ನನ್ನ ಹೆಸರಿಗೆ ರಿಜಿಸ್ಟರ್ ಮಾಡಿಕೊಟ್ಟನು ಎನ್ನುವುದು ಸರಿ.

7. ದಿಃ 01.03.2021 ರಂದು ಬೇರಿಯಾ ಗ್ರಾಮದ ದೊಡ್ಡಮ್ಮ ಕರಿಯಾ ದೇವಸ್ಥಾನದಲ್ಲಿ ನನ್ನ ಮಗಳು ಪ್ರಿಯಾಂಕ ಹಾಗೂ ನಟರಾಜ್ ನಿಗೂ ಮದುವೆಯಾಗಿರುತ್ತದೆ, ಅ ಸಮಯದಲ್ಲಿ ಪದ್ಮರಾಜ್ ಮತ್ತು ಗಂಗಾಧರ್ ಇದ್ದರು ಎಂದರೆ ಸರಿಯಲ್ಲ. ಆದಾದ ಮೇಲೆ ನಟರಾಜ್ ನನ್ನ ಮಗಳನ್ನು ಬೆಂಗಳೂರಿಗೆ ಕರೆದುಕೊಂಡು ಹೋದನು ಎಂದರೆ ಸರಿಯಲ್ಲ. ಅನಂತರ ಆರೋಪಿಯು ನನ್ನ ಮಗಳು ಗಲಾಟೆ ಮಾಡಲು ಪ್ರಾರಂಭಿಸಿದರು ಎನ್ನುವುದು ಗೊತ್ತಿಲ್ಲ. ನಟರಾಜ್ ನು ಜಮೀನನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದರಿಂದ ಆರೋಪಿಯು ಪ್ರಿಯಾಳು ಬಂದು ನನ್ನ ಗಂಡನನ್ನು ಕಿತ್ತುಕೊಂಡಳು, ಆಸ್ತಿಯನ್ನು ಕಿತ್ತುಕೊಂಡಳು ಅಂತ ದ್ವೇಷ ಇಟ್ಟುಕೊಂಡಿದ್ದಳು.

8. ಆನಂತರ ನಟರಾಜ್ ಮತ್ತು ಪ್ರಿಯಾ ಬೆಂಗಳೂರಿನಿಂದ ಬಂದು ಮೈಸೂರಿನ ಹೂಟಗಳ್ಳಿಯಲ್ಲಿ ಮನೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಕೆಆರ್ ಆಸ್ಪತ್ರೆಗೆ ನಾನು ಮತ್ತು ನನ್ನ ಕುಟುಂಬದವರು ಹೋಗಿ ನೋಡಲಾಗಿ ಪ್ರಿಯಾಳ ಕುತ್ತಿಗೆಗೆ ಚಾಕುವಿನಿಂದ ಕೂಯ್ದಿರುವ ಗಾಯ ಇತ್ತು ಎಂದರೆ ಸರಿಯಲ್ಲ. ಪ್ರಿಯಾಳನ್ನು 2 ನೇ ಮದುವೆಯಾಗಿದ್ದಕ್ಕೆ ಮತ್ತು ನಟರಾಜ್ ನು ನನಗೆ ಜಮೀನನ್ನು ಬರೆದುಕೊಟ್ಟಿದ್ದ ದ್ವೇಷದಿಂದ ಪ್ರಿಯಾಳನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿಯು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಮಗಳ ಮದುವೆ ಲಗ್ನ ಪತ್ರಿಕೆ ಮತ್ತು ಕ್ರಯ ಪತ್ರದ ನಕಲನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು **ನಿಪಿ.5** ಎಂದು ಗುರುತಿಸಲಾಯಿತು. ಹೇಳಿಕೆಯ ಭಾಗಗಳನ್ನು **ನಿಪಿ.5(ಎ) ಯಿಂದ 5(ಎಫ್)** ಎಂದು ಗುರುತಿಸಲಾಯಿತು. ಈ ರೀತಿಯಾಗಿ ನಾನು ಹೇಳಿಕೆ ಕೊಟ್ಟಿದ್ದರು, ಇಲ್ಲ ಎಂಬುದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>

9. ನನ್ನ ಮಗಳು ಶ್ರೀಧರ್ ನ ಮನೆಯಲ್ಲಿ 20 ದಿನಗಳು ಇದ್ದಳು. ನಟರಾಜ್ ನನ್ನು ಶ್ರೀಧರ್ ನ ಮನೆ ಒಳಗೆ ಕೂಡಿ ಹಾಕಿದ್ದರು. ನನ್ನ ಮಗಳಿಗೂ ಮತ್ತು ನಟರಾಜ್ ನಿಗೂ ಅಕ್ರಮ ಸಂಬಂಧವಿದೆ ಎಂದು, ನಟರಾಜನು ಶ್ರೀಧರ ನ ಮನೆಗೆ ಹೋದಾಗ ಅವನನ್ನು ಕೂಡಿ ಹಾಕಿದ್ದರು. ನಟರಾಜ್ ನು ನನ್ನ ಮಗಳ ಜೊತೆ ಅಕ್ರಮ ಸಂಬಂಧ ಇಟ್ಟು ಕೊಂಡಿರುವ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿಲ್ಲ. ಶ್ರೀಧರನಿಗೂ ಮತ್ತು ನನ್ನ ಮಗಳಿಗೂ ನ್ಯಾಯಾಲಯದಲ್ಲಿ ವಿಚ್ಚೇಧನವನ್ನು ಮಾಡಿಸಿರುವುದಿಲ್ಲ. ಶ್ರೀಧರನ ಮನೆಯ ಕಡೆಯಿಂದ ಮತ್ತು ನಮ್ಮ ಮನೆಯ ಕಡೆಯವರಿಂದ ತಲಾ ಸುಮಾರು 10 ರಿಂದ 15 ಲಕ್ಷ ಮದುವೆಗೆ ಖರ್ಚು ಮಾಡಿರುತ್ತೇವೆ. ಶ್ರೀಧರ ರವರ ಮನೆಯವರಿಗೆ ಪತ್ರ ವ್ಯವಹಾರ ಮಾಡಿ ನಾವು ಯಾವುದೇ ಪರಿಹಾರವನ್ನು ಕೊಟ್ಟಿರುವುದಿಲ್ಲ.

10. ಸರ್ವೆ ನಂಬರ್ 7/4 ರಲ್ಲಿ 25 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇದೆ. ಒಂದು ಗುಂಟೆಗೆ ರೂ.5 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಈಗ ನನ್ನ ಮಗಳು ಹೊಸ ಮುದ್ದಾಪುರ ಗ್ರಾಮದ ನಟರಾಜ್ ನ ಮನೆಯಲ್ಲಿ ವಾಸವಿದ್ದಾಳೆ. ಆರೋಪಿಯನ್ನು ನಾನು ನೋಡಿರುವುದಿಲ್ಲ, ಆಕೆಯ ಪರಿಚಯವಿಲ್ಲ. ನನ್ನ ಮಗಳು ಅಡುಗೆ ಮನೆಯಲ್ಲಿ ಅಡುಗೆ ಮಾಡುವಾಗ ಇಳಿಗೆ ಮಣೆಯ ಮೇಲೆ ಜಾರಿ ಬಿದ್ದು ಕತ್ತಿಗೆ ಗಾಯವಾಗಿರುತ್ತದೆ ಎನ್ನುವುದು

ಗೊತ್ತಿಲ್ಲ. ಆರೋಪಿಯು ನನ್ನ ಮಗಳ ಕುತ್ತಿಗೆಗೆ ಚಾಕು ಹಾಕಿರುವ ವಿಚಾರವನ್ನು ನಾನು ನೋಡಿರುವುದಿಲ್ಲ. ನನಗೇನು ಗೊತ್ತಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ : ಇಲ್ಲ</u>

(ನನ್ನ ಉ ಮೇ ತೆ ನ್ಯಾ.ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು